ದಿನಾಂಕಃ **19-12-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಅರ್ಜಿದಾರರ ಪರ ವಕೀಲರಿಂದ:-

ನಾನು ಈ ದಾವೆಯಲ್ಲಿ ಅರ್ಜಿದಾರ ಪರ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ನಿಪಿ-1 ದಾಖಲೆಯಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **4(ಎ) , 7(ಎ) ಮತ್ತು (ಬಿ)** ಎದುರುದಾರರ ಪರ ವಕೀಲರಿಂದಃ-

ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಜಿಲ್ಲಾ ಮಟ್ಟದಲ್ಲಿ ಪತ್ರಬರಹಗಾರನಾಗಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಪತ್ರಬರಹಗಾರನಾಗಿ ಕೆಲಸ ಮಾಡಲು ಪ್ರತಿವರ್ಷ ನನ್ನ ಪರವಾನಿಗೆಯನ್ನು ನವೀಕರಣ ಮಾಡಿಸುತ್ತೇವೆ. 2019 ನೇ ಸಾಲಿನಲ್ಲಿ ನನ್ನ ಪರವಾನಿಗೆ ನವೀಕರಣ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ. ಅರ್ಜಿದಾರರು ನಿಪಿ-1 ವಿಲ್ ಗೆ ಸಂಬಂಧಪಟ್ಟಂತೆ ಸಾಕ್ಷ್ಯವನ್ನು ಹೇಳಬೇಕೆಂದು ಹೇಳಿದ ಮೇರೆಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಿಪಿ-1 ದಾಖಲೆಯಲ್ಲಿ ಅಸಲು ದಾವಾ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಅಸಲು ದಾವೆ ತೀರ್ಪಿನಲ್ಲಿ ಕಮ್ಮಲಮ್ಮರವರ ಭಾಗಂಶಕ್ಕೆ ಎಷ್ಟು ಜಮೀನು ಬಂದಿದೇ ಎಂಬುದು ನಮೂದಾಗಿರುವುದಿಲ್ಲ ಆದರೆ 1/8 ಭಾಗ ಎಂದು ನಮೂದಾಗಿದ್ದು, ಆ ಪ್ರಕಾರ ನಾನು ವಿಲ್ ನ್ನು ತಯಾರು ಮಾಡಿರುತ್ತೇನೆ.

ನಿಪಿ-1 ನ್ನು ಬರೆಯುವ ಸಮಯದಲ್ಲಿ ಕಮ್ಮಲಮ್ಮ, ಮಾದಪ್ಪ ಮತ್ತು ಚಂದ್ರಮ್ಮ ರವರ ಜೊತೆಯಲ್ಲಿ ಬಂದಿದ್ದರು. ನಿಪಿ-1 ದಾಖಲೆಯನ್ನು ತಯಾರಿಸಲು ಕಮ್ಮಲಮ್ಮ ರವರು ನೀಡಿದ ಮಾಹಿತಿಯ ಮೇರೆಗೆ ತಯಾರು ಮಾಡಿರುತ್ತೇನೆ. ನಿಪಿ-1 ದಾಖಲೆಯನ್ನು ತಯಾರಿಸುವ ಸಮಯದಲ್ಲಿ ಕಮ್ಮಲಮ್ಮರವರಿಗೆ ಸುಮಾರು 85 ವರ್ಷ ಎಂದು ನಮೂದು ಮಾಡಿರುತ್ತೇನೆ. ನಿಪಿ-1 ದಾಖಲೆಯನ್ನು ತಯಾರಿಸುವ

ಸಮಯದಲ್ಲಿ ಕಮ್ಮಲಮ್ಮರವರು ತಮಗೆ 85 ವರ್ಷ ವಯಸ್ಸು ಎಂದು ತೋರಿಸಲು ಯಾವುದೇ ದಾಖಲೆಯನ್ನು ನನಗೆ ಕೊಟ್ಟಿರುವುದಿಲ್ಲ . ನಿಪಿ-1 ದಾಖಲೆಯನ್ನು ತಯಾರಿಸುವ ಸಮಯದಲ್ಲಿ ಕಮ್ಮಲಮ್ಮರವರಿಗೆ ಸುಮಾರು 90 ವರ್ಷ ವಯಸ್ಸಾಗಿದ್ದು ಮತ್ತು ಅವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಗೆ ಸಾಕ್ಷಿದಾರರು ನನ್ನ ಸಮಕ್ಷಮ ಸಹಿಯನ್ನು ಮಾಡಿದರೆ. ನಿಪಿ-1 ದಾಖಲೆಗೆ ಕಮ್ಮಲಮ್ಮ ನಂತರ ಮಾದಪ್ಪ ಮತ್ತು ಚಂದ್ರಮ್ಮ ತದನಂತರ ಕೊನೆಯಲ್ಲಿ ನಾನು ಸಹಿಯನ್ನು ಮಾಡಿರುತ್ತೇನೆ. ಕಮ್ಮಲಮ್ಮ ರವರ ಆಸ್ತಿಗೆ ಸಂಬಂಧಪಟ್ಟಂತೆ ನಿಪಿ-1 ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗೆ ನಾನು ಸಹಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳು ಈ ಪ್ರಕರಣದಲ್ಲಿ ಸರ್ವೆ ಯನ್ನು ಮಾಡಿ, ಸಲ್ಲಿಸಿದ ವರದಿಯ ಮಹಜರ್ ನಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಡಿ-1 ಎಂದು, ಸಾಕ್ಷಿಯ ಸಹಿಯನ್ನು ನಿಡಿ-1 (ಎ) ಎಂದು ಗುರುತಿಸಲಾಯಿತು. ನಿಡಿ-1 ಮಹಜರ್ ಗೆ ನಾನು ಸಹಿಯನ್ನು ಮಾಡುವ ಸಮಯದಲ್ಲಿ ಕಮ್ಮಲಮ್ಮರವರು ಜೀವಂತವಾಗಿದ್ದರು ಅಥವಾ ಇಲ್ಲವೋ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಿಡಿ-1 ದಾಖಲೆಗೆ ನಾನು ಸಹಿಯನ್ನು ಸರ್ವೆ ಕಚೇರಿಯಲ್ಲಿ ಮಾಡಿರುತ್ತೇನೆ. ಸರ್ವೆ ಅಧಿಕಾರಿಗಳು ಈ ಪ್ರಕರಣದಲ್ಲಿ ಸರ್ವೆಯನ್ನು ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿ. ನಿಡಿ-1 ದಾಖಲೆಯ ಮಹಜರ್ ನಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ಅಧಿಕಾರಿಗಳು ಹೇಳಿದ ಮೇರೆಗೆ ನಿಡಿ-1 ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಕಮ್ಮಲಮ್ಮರವರು ನಿಪಿ-1 ದಾಖಲೆಯನ್ನು ಬರೆದುಕೊಡುವಷ್ಟು ಶಕ್ತರಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು, ಈ ಪ್ರಕರಣದ ಅರ್ಜಿದಾರರಾದ ಈಶ್ವರಪ್ಪ, ಮಾದಪ್ಪ ಮತ್ತು ಚಂದ್ರಮ್ಮರವರ ಸೇರಿಕೊಂಡು ನಿಪಿ-1 ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊನ್ನಾಳಿ.